# ಪಿಎಸಿಎಲ್ ಲಿ .,ವಿಷಯದಲ್ಲಿ, ಸಾಮಾನ್ಯವಾಗಿ ಕೇಳಲ್ಪಡುವ ಪ್ರಶ್ನೆಗಳು

ಹಿನ್ನೆಲೆ:

1. ಪಿಎಸಿಎಲ್ ಲಿ., (ಪಿಎಸಿಎಲ್), ವಿವಿಧ ಕಲೆಕ್ಟಿವ್ ಇನ್ವೆಸ್ಟ್‌ಮೆಂಟ್ ಸ್ಕೀಮ್‌ಗಳ (ಸಿಐಎಸ್) ಮೂಲಕ ರೂ 49000 ಕೋಟಿ (ಅಂದಾಜು) ಮೊತ್ತದ ಹೊಣೆಗಾರಿಕೆಯನ್ನು ಸ್ವೀಕರಿಸಿದೆ ಎಂದು ಹೇಳಿಕೊಂಡಿದೆ. ಆಗಸ್ಟ್ 22, 2014 ದಿನಾಂಕ ಹೊಂದಿರುವ ಸೆಬಿ ಆದೇಶಕ್ಕೆ ಅನುಸಾರವಾಗಿ, ಪಿಎಸಿಎಲ್ ಸ್ಕೀಮ್‌ಗಳು ಸಿಐಎಸ್ ಸ್ವರೂಪದಲ್ಲಿವೆ ಮತ್ತು ಇನ್ನೂ ಅನೇಕ ವಿಷಯಗಳ ಜೊತೆಗೆ, ತನ್ನ ಗ್ರಾಹಕರಿಗೆ ನೀಡಿದ ಕೊಡುಗೆಗೆ ಅನುಸಾರವಾಗಿ ಮೂರು ತಿಂಗಳ ಅವಧಿಯೊಳಗೆ, ಅವರಿಗೆ ಸಲ್ಲಬೇಕಿರುವ ಮೊತ್ತವನ್ನು ಅದರ ಬಡ್ಡಿ ಸಹಿತವಾಗಿ ಹಿಂತಿರುಗಿಸಬೇಕೆಂದು ನಿರ್ದೇಶನ ನೀಡಿದೆ.
2. ಪಿಎಸಿಎಲ್ ನ ಪ್ರಚಾರಕರು / ನಿರ್ದೇಶಕರುಗಳು ಮಾನ್ಯ ಸೆಕ್ಯುರಿಟೀಸ್ ಅಪ್ಯಾಲೇಟ್ ಟ್ರಿಬ್ಯೂನಲ್ (ಎಸ್‌ಎಟಿ) ಗೆ ಮನವಿ ಸಲ್ಲಿಸಿದರೂ, ಅವರ ಮನವಿಗಳನ್ನು ತಿರಸ್ಕರಿಸಲಾಯಿತು ಮತ್ತು ಸೆಬಿ ಆದೇಶವನ್ನು ಎತ್ತಿ ಹಿಡಿಯಲಾಯಿತು. ಆಗಸ್ಟ್ 14, 2015 ರ ಅದೇಶದಿಂದ ತಮಗೆ ಅನ್ಯಾಯವಾಗಿದೆ ಎಂದು, ಎಸ್‌ಎಟಿ ಆದೇಶವನ್ನು ತಡೆಹಿಡಿಯಬೇಕೆಂದು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಮನವಿಯನ್ನು ಸಲ್ಲಿಸಲಾಗಿತ್ತು.
3. ಮಾನ್ಯ ಸರ್ವೋಚ್ಚ ನ್ಯಾಯಾಲಯವು ತನ್ನ ಫೆಬ್ರವರಿ 02, 2016 ರ ಅದೇಶದನ್ವಯ, ಪಿಎಸಿಎಲ್ ಲಿ., ಮತ್ತು ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ (ಸಿವಿಲ್ ಅಪೀಲ್ ನಂ. 13394/2015) ವಿಷಯದಲ್ಲಿ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಲ್ಲಿ, ಮಾನ್ಯ ಶ್ರೀ. ಜಸ್ಟೀಸ್ (ನಿವೃತ್ತ) ಆರ್. ಎಂ. ಲೋಧಾ (ಮಾಜಿ ಚೀಫ್ ಜಸ್ಟೀಸ್ ಆಫ್ ಇಂಡಿಯ) ಇವರ ಚೇರ್ಮನ್‌ಶಿಪ್ ಅಡಿಯಲ್ಲಿ ಒಂದು ಸಮಿತಿಯನ್ನು ರಚಿಸಿ, ಪಿಎಸಿಎಲ್ ಟೈಟಲ್ ಡೀಡ್‌ಗಳನ್ನು ತನ್ನ ಅಧೀನಕ್ಕೆ ತೆಗೆದುಕೊಳ್ಳಲು, ಮತ್ತು ಪಿಎಸಿಎಲ್ ಗ್ರಾಹಕರಿಗೆ ಮರುಪಾವತಿ ಮಾಡುವುದಕ್ಕಾಗಿ ಆಸ್ತಿಗಳನ್ನು ಮಾರಲು ಅಧಿಕಾರವನ್ನು ನೀಡಿತು.
4. ಅದಕ್ಕನುಸಾರವಾಗಿ, ಪಿಎಸಿಎಲ್ ಲಿ., ನ ವಿವಿಧ ಸ್ಕೀಮ್‌ಗಳಲ್ಲಿ ಬಂಡವಾಳ ಹೂಡಿರುವ ಪಿಎಸಿಎಲ್ ಗ್ರಾಹಕರ ಅಸಲೀ ಪತ್ರಗಳನ್ನು ಪರಿಶೀಲಿಸಿದ ನಂತರ, ಅವರಿಗೆ ಮರುಪಾವತಿ ಮಾಡಲು, ಪಿಎಸಿಎಲ್ ಆಸ್ತಿಗಳನ್ನು ಮಾರಾಟ ಮಾಡುವ ಪ್ರಕ್ರಿಯೆಯನ್ನು ಆರಂಭಿಸಲೆಂದು, ಈ ಸಮಿತಿಯು ಸಿಬಿಐ ನಿಂದ ಎಲ್ಲಾ ಆಸ್ತಿ ದಾಖಲೆಗಳನ್ನು ಸಂಗ್ರಹಿಸುವ ಪ್ರಕ್ರಿಯೆಯಲ್ಲಿ ತೊಡಗಿದೆ. ಈ ಮಧ್ಯೆ, ಸಾರ್ವಜನಿಕ ಸೂಚನೆಯ ಮೂಲಕ ಪಿಎಸಿಎಲ್ ಗಾಹಕರಿಗೆ ಈ ಮುಂದಿನಂತೆ ಮಾಹಿತಿ ಮತ್ತು ಸಲಹೆ ನೀಡಲಾಗಿದೆ;
   (i) ಸಮಿತಿಯು ಈ ವಿಷಯದಲ್ಲಿ ಮುಂದಿನ ಮಾಹಿತಿಯನ್ನು ತಿಳಿಸುವ ತನಕ, ಪಿಎಸಿಎಲ್ ಲಿ., ನ ಸ್ಕೀಮ್‌ಗಳಲ್ಲಿ ತಮ್ಮ ಬಂಡವಾಳದ ಶೇರ್ ದಾಖಲೆಗಳು / ದಾಖಲಾತಿಗಳನ್ನು ಪಿಎಸಿಎಲ್ ಲಿ., ಅಥವಾ ಯಾವುದೇ ಇತರ ವ್ಯಕ್ತಿಗೆ ನೀಡಬಾರದು; ಮತ್ತು
   (ii) ಪಿಎಸಿಎಲ್ ಲಿ., ಅಥವಾ ಅದರ ಅಧಿಕಾರಿಗಳು / ಏಜೆಂಟ್ ಇತ್ಯಾದಿಗಳಿಂದ ಯಾವುದೇ ಹೊಸ ಬಂಡವಾಳ ಹೂಡಿಕೆ ಅಥವಾ ಕಂತಿನ ಅಥವಾ ಬೇರಾವುದೇ ವಿಷಯದಲ್ಲಿ ಯಾವುದೇ ಹಣಪಾವತಿಯನ್ನು ಮಾಡಬಾರದು.

1. ನಾನು ಒಬ್ಬ ಪಿಎಸಿಎಲ್ ಗ್ರಾಹಕ. ನಾನು ಏನು ಮಾಡಬೇಕು?

ಉತ್ತರ: 05.03.2016 ದಿನಾಂಕದ ಸಾರ್ವಜನಿಕ ಪ್ರಕಟಣೆಗೆ ಅನುಸಾರವಾಗಿ, ಪಿಎಸಿಎಲ್ ಗ್ರಾಹಕರು ತಮ್ಮ ಅಸಲೀ ದಾಖಲಾತಿಗಳನ್ನು ತಮ್ಮಲ್ಲಿಯೇ ಇಟ್ಟುಕೊಳ್ಳಬೇಕೆಂದು ಎಚ್ಚರಿಸಲಾಗಿದೆ. ಪಿಎಸಿಎಲ್ ಗ್ರಾಹಕರಿಂದ ಸಮಿತಿಯು ಕ್ಲೇಮ್‌ಗಳನ್ನು ಸ್ವೀಕರಿಸುವ ಮಾಹಿತಿ ತಿಳಿಸಿದಾಗ ಮಾತ್ರ, ನೇಮಿಸಲ್ಪಟ್ಟಿರುವ ಸಮಿತಿಗೆ ಅಥವಾ ನೇಮಿಸಲ್ಪಟ್ಟ ಅಧಿಕಾರಿಗೆ ಅದನ್ನು ನೀಡಬಹುದಾಗಿದೆ. ಮರುಪಾವತಿಯನ್ನು ಪಡೆಯಲು ಅಸಲೀ ದಾಖಲಾತಿಗಳನ್ನು ಸಲ್ಲಿಸುವುದು ಕಡ್ಡಾಯವಾಗಿದೆ ಮತ್ತು ಇದನ್ನು ಹೊಂದಿಲ್ಲದಿದ್ದರೆ ಯಾವುದೇ ಮರುಪಾವತಿ ಕ್ಲೇಮ್ ಗಳನ್ನು ಅಂಗೀಕರಿಸಲಾಗುವುದಿಲ್ಲ.

2. ಮರುಪಾವತಿಗಾಗಿ ನನ್ನ ಅರ್ಜಿಯನ್ನು ಎಲ್ಲಿಗೆ ಕಳುಹಿಸಬೇಕು?

ಉತ್ತರ: ಪಿಎಸಿಎಲ್ ಗ್ರಾಹಕರಿಂದ ಕ್ಲೇಮ್‌ಗಳನ್ನು ಆಹ್ವಾನಿಸುವ ಬಗ್ಗೆ ಜಾಹೀರಾತು / ಸಾರ್ವಜನಿಕ ಪ್ರಕಟಣೆ ಇತ್ಯಾದಿ ಮೂಲಕ ಸೆಬಿ / ಸಮಿತಿಯು ಪಿಎಸಿಎಲ್ ಗ್ರಾಹಕರಿಗೆ ಮಾಹಿತಿಯನ್ನು ತಿಳಿಸುತ್ತದೆ. ಅಂತಹ ಜಾಹೀರಾತು / ಸಾರ್ವಜನಿಕ ಪ್ರಕಟಣೆ ನೀಡುವ ತನಕ, ಗ್ರಾಹಕರು ತಮ್ಮ ಎಲ್ಲಾ ಅಸಲೀ ದಾಖಲೆಗಳನ್ನು ತಮ್ಮೊಂದಿಗೆ ಇಟ್ಟುಕೊಳ್ಳಬೇಕು ಮತ್ತು ಯಾವುದೇ ವ್ಯಕ್ತಿ, ಏಜೆಂಟ್ ಇತ್ಯಾದಿಗಳಿಗೆ ನೀಡಬಾರದು, ವರ್ಗಾಯಿಸಬಾರದು, ಹಂಚಿಕೊಳ್ಳಬಾರದು ಎಂದು ಸಲಹೆ ನೀಡಲಾಗಿದೆ.

3. ಮರುಪಾವತಿಗಾಗಿ ನನ್ನ ಅರ್ಜಿಯನ್ನು ನಾನು ಯಾವಾಗ ಮತ್ತು ಎಲ್ಲಿಗೆ ಕಳುಹಿಸಬೇಕು?

ಉತ್ತರ: ಪಿಎಸಿಎಲ್ ಗ್ರಾಹಕರು, ನಿರ್ದಿಷ್ಟ ಸೂಚನೆಯನ್ನು ಪ್ರಕಟಿಸಿದ ನಂತರ ಮಾತ್ರ, ಅಪ್ಲಿಕೇಶನ್ ಫಾರ್ ರೀಫಂಡ್ (ಎಎಫ್‌ಆರ್) ಅನ್ನು ಅವಶ್ಯಕ ದಾಖಲೆಗಳೊಂದಿಗೆ, ಆ ಜಾಹೀರಾತು / ಸಾರ್ವಜನಿಕ ಪ್ರಕಟಣೆಯ ಸೂಚನೆಯಲ್ಲಿ ತಿಳಿಸಲಾಗುವ ವಿಳಾಸ / ಅಧಿಕಾರಿಗೆ ಸಲ್ಲಿಸಬೇಕು.

4. ಪಿಎಸಿಎಲ್ ಲಿ., ಗ್ರಾಹಕರಿಂದ ಸೆಬಿ ಯಾವಾಗ ಕ್ಲೇಮ್ ಗಳನ್ನು ಆಹ್ವಾನಿಸುತ್ತದೆ?

ಉತ್ತರ: ಪಿಎಸಿಎಲ್ ಆಸ್ತಿಗಳನ್ನು ಮಾರಾಟ ಮಾಡಿದ ನಂತರ ಮತ್ತು ಸಾಕಷ್ಟು ಮೊತ್ತವು ಲಭ್ಯವಾದ ನಂತರ, ಮರುಪಾವತಿ ಉದ್ದೇಶಕ್ಕಾಗಿ ಪಿಎಸಿಎಲ್ ಗ್ರಾಹಕರಿಂದ ಕ್ಲೇಮ್‌ಗಳನ್ನು ಆಹ್ವಾನಿಸಲಾಗುತ್ತದೆ. ಸಮಿತಿಯು ಸೂಚಿಸುವ ನಮೂನೆಯಲ್ಲಿ ಮರುಪಾವತಿಗಾಗಿ ಅರ್ಜಿ ಸಲ್ಲಿಸುವಂತೆ ಸಮಿತಿಯು ಗ್ರಾಹಕರನ್ನು ಆಹ್ವಾನಿಸುತ್ತದೆ.

5. ನನ್ನ ಸ್ಕೀಮ್‌ನ ಅಂತಿಮ ದಿನಾಂಕವು ಈಗಾಗಲೇ ಮುಗಿದಿದೆ ಮತ್ತು ಪಿಎಸಿಎಲ್ ಏಜೆಂಟ್‌ಗಳು ನನ್ನ ಬಂಡವಾಳಕ್ಕೆ ಪರ್ಯಾಯ ಸಾಧನಗಳನ್ನು / ಸ್ಕೀಮ್‌ಗಳನ್ನು ನೀಡಲು ಸಿದ್ಧರಿದ್ದಾರೆ, ದಯವಿಟ್ಟು ನಾನೇನು ಮಾಡಬೇಕೆಂದು ತಿಳಿಸಿ?

ಉತ್ತರ: ಅಸಲೀ ದಾಖಲೆಗಳನ್ನು ನಿಮ್ಮಲ್ಲೇ ಇಟ್ಟುಕೊಂಡಿದ್ದು, ಮರುಪಾವತಿಗಾಗಿ ಕೇಳಿದಾಗ ಅದನ್ನು ಸಲ್ಲಿಸಬೇಕೆಂದು ಸಲಹೆ ನೀಡಲಾಗಿದೆ. ಪ್ರಸ್ತುತವಿರುವ ಬಂಡವಾಳವನ್ನು ಯಾವುದೇ ಇತರ ಸ್ಕೀಮ್‌ಗಳಿಗೆ ಪರಿವರ್ತಿಸಲು ಅಥವಾ ಬದಲಾಯಿಸಲು, ಯಾವುದಾದರೂ ಇದ್ದಲ್ಲಿ, ಪಿಎಸಿಎಲ್ ಅಥವಾ ಅದರ ಏಜೆಂಟ್‌ಗಳನ್ನೂ ಒಳಗೊಂಡು

ಯಾವುದೇ ವ್ಯಕ್ತಿಯ ಯಾವುದೇ ಒತ್ತಡಕ್ಕೆ ಮಣಿಯಬಾರದೆಂದು ಸಲಹೆ ನೀಡಲಾಗಿದೆ. ಪಿಎಸಿಎಲ್ ಆಸ್ತಿಗಳನ್ನು ಮಾರಿದ ನಂತರ ಪಿಎಸಿಎಲ್ ಲಿ., ನ ಅಸಲೀ ಬಂಡವಾಳ ಹೂಡಿಕೆದಾರರಿಗೆ ಮರುಪಾವತಿಗಳನ್ನು ಮಾಡಬೇಕೆಂದು ಮಾನ್ಯ ಸರ್ವೋಚ್ಛ ನ್ಯಾಯಾಲಯವು ಸಮಿತಿಗೆ ಅಧಿಕಾರ ನೀಡಿದೆ. ಈ ಆದೇಶಕ್ಕೆ ವಿರುದ್ಧವಾಗಿ ಯಾವುದೇ ವ್ಯಕ್ತಿಯು ಯಾವುದೇ ರೀತಿಯ ಪ್ರಯತ್ನವನ್ನು ಮಾಡುವುದು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದ ಉಲ್ಲಂಘನೆ ಆಗಿರುತ್ತದೆ ಮತ್ತು ಆದ್ದರಿಂದ ಹೀಗೆ ಮಾಡಬಾರದೆಂದು ಸಲಹೆ ನೀಡಲಾಗಿದೆ.

6. ಅಲ್ಲಿಯವರೆಗೆ ನಾನು ಏನು ಮಾಡಬೇಕು?

ಉತ್ತರ: ಸೆಬಿ / ಸಮಿತಿಯು ತಿಳಿಸುವ ಪತ್ರಿಕಾ ಪ್ರಕಟಣೆ / ಜಾಹೀರಾತಿ ಇತ್ಯಾದಿಗಾಗಿ, ವಾರ್ತಾ ಪತ್ರಿಕೆ ಇತ್ಯಾದಿಗಳನ್ನು ನೀವು ಗಮನಿಸುತ್ತಿರಬಹುದು. ನೀವು ಸೆಬಿ ವೆಬ್‌ಸೈಟ್ www.sebi.gov.in ಅನ್ನೂ ಸಹ ಗಮನಿಸಬಹುದು ಅಥವಾ ಕರ ರಹಿತ ಸಹಾಯವಾಣಿ ಸಂಖ್ಯೆ 1800 266 7575 ಅಥವಾ 1800 22 75 75 ಕ್ಕೆ ಕರೆಮಾಡಬಹುದು.